## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯಃ– ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿರುವ ಜಿಲ್ಲಾ ಕೇಂದ್ರ ಉಪಕಾರಾಗೃಹಗಳನ್ನು ಜಿಲ್ಲಾ ಕಾರಾಗೃಹಗಳನ್ನಾಗಿ ಪರಿವರ್ತಿಸಿ ಆದೇಶ ಹೊರಡಿಸುವ ಕುರಿತು.

ಓದಲಾಗಿದೆಃ– ಎಡಿಜಿಪಿ(ಪ್ರಿಸನ್ಸ್) ಇವರ ಪತ್ರ ಸಂಖ್ಯೆ: ಎಡಿಎ01/ಸಿಆರ್–51/2012–13, ದಿನಾಂಕ: 08.05.2014

*****

ಪ್ರಸ್ತಾವನೆ:–

ಮೇಲೆ ಓದಲಾದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರು ಇವರು ತಮ್ಮ ಪತ್ರದಲ್ಲಿ, ಹಾಸನ, ಚಿಕ್ಕಮಗಳೂರು, ಮಂಡ್ಯ ಮತ್ತು ಕೋಲಾರ ಜಿಲ್ಲೆಗಳಲ್ಲಿ ಇತರೆ ಕಾರಾಗೃಹಗಳಿಗಿಂತ ಹೆಚ್ಚಿನ ಸಂಖ್ಯೆಯ ಬಂದಿಗಳು ಅಂದರೆ 350 ರಿಂದ 400 ಜನ ದಾಖಲಾಗುತ್ತಿದ್ದಾರೆಂದು ತಿಳಿಸಿರುತ್ತಾರೆ. ಅಲ್ಲದೆ, ಕಾರಾಗೃಹಗಳ ಕೈಪಿಡಿ ನಿಯಮ 1978 ಉಪನಿಯಮ 6(2)(i)ರ ಪ್ರಕಾರ ಈ ಕಾರಾಗೃಹಗಳಲ್ಲಿ ಸಾದಾ ಶಿಕ್ಷೆಗೊಳಪಟ್ಟ ಬಂದಿಗಳನ್ನು ಗರಿಷ್ಠ 3 ತಿಂಗಳವರೆಗೆ ಬಂದಿಸಿಡುವ ಅವಕಾಶ ಮಾತ್ರ ಇದ್ದು, ಜಿಲ್ಲಾ ಕಾರಾಗೃಹಗಳನ್ನಾಗಿ ಪರಿವರ್ತಿಸಿದಲ್ಲಿ ಗರಿಷ್ಠ 6 ತಿಂಗಳವರೆಗೆ ಬಂದಿಸಿಡುವ ಅವಕಾಶ ದೊರೆಯುತ್ತದೆ. ಅಲ್ಲದೆ, ಹಾಸನ, ಚಿಕ್ಕಮಗಳೂರು, ಮಂಡ್ಯ ಮತ್ತು ಕೋಲಾರ ಜಿಲ್ಲಾ ಕೇಂದ್ರ ಉಪ ಕಾರಾಗೃಹಗಳನ್ನು ಜಿಲ್ಲಾ ಕಾರಾಗೃಹಗಳನ್ನಾಗಿ ಪರಿವರ್ತಿಸಿದಲ್ಲಿ, ಈಗಾಗಲೇ ಕಾರಾಗೃಹದ ಅಧೀಕ್ಷಕರಾಗಿ ಸಹಾಯಕ ಅಧೀಕ್ಷಕರೇ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿ ಅಧಿಕಾರಿಯೇ ಕಾರಾಗೃಹದ ಮುಖ್ಯಸ್ಥರ ಹುದ್ದೆಯಲ್ಲಿ ಮುಂದುವರೆಯುವುದರಿಂದ, ಸರ್ಕಾರಕ್ಕೆ ಹುದ್ದೆ ಸೃಜನೆಯ ಆರ್ಥಿಕ ಹೊರೆ ಉಂಟಾಗುವುದಿಲ್ಲ. ಆದುದರಿಂದ, ಮೇಲ್ಕಂಡ ನಾಲ್ಕು ಜಿಲ್ಲಾ ಕೇಂದ್ರ ಉಪಕಾರಾಗೃಹಗಳನ್ನು ಜಿಲ್ಲಾ ಕಾರಾಗೃಹಗಳನ್ನಾಗಿ ಪರಿವರ್ತಿಸಿ ಆದೇಶ ಹೊರಡಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 69 ಪಿಆರ್‌ಇ 2014**
**ಬೆಂಗಳೂರು, ದಿನಾಂಕಃ 14–07–2014**

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹಾಸನ, ಚಿಕ್ಕಮಗಳೂರು, ಮಂಡ್ಯ ಮತ್ತು ಕೋಲಾರ ಈ ನಾಲ್ಕು ಜಿಲ್ಲಾ ಕೇಂದ್ರ ಉಪಕಾರಾಗೃಹಗಳನ್ನು ಜಿಲ್ಲಾ ಕಾರಾಗೃಹಗಳನ್ನಾಗಿ ಪರಿವರ್ತಿಸಲು ಸರ್ಕಾರವು ಅನುಮತಿಯನ್ನು ನೀಡಿದೆ.

Add. I.G, Issue Circular, change name board of Jail. 17/7/14

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ.ಎಸ್. ಜೋಗೋಜಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಸೆರೆಮನೆ ಮತ್ತು ಸಿನಿಮಾ)

353
18/7

ಗೆ,

1] ಮಹಾಲೇಖಪಾಲರು (ಜಿ&ಎಸ್‌ಎಸ್‌ಎ, ಇ & ಆರ್‌ಎಸ್‌ಎ, ಎ&ಇ), ಕರ್ನಾಟಕ ಬೆಂಗಳೂರು.
2] ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರವರ ಕಛೇರಿ, ಶೇಷಾದ್ರಿ ರಸ್ತೆ, ಬೆಂಗಳೂರು.
3] ಸಹಾಯಕ ಅಧೀಕ್ಷಕರು, ಹಾಸನ/ಚಿಕ್ಕಮಗಳೂರು/ಮಂಡ್ಯ/ಕೋಲಾರ.

..2.